1992-93ನೇ ಸಾಲಿನ ರಾಜ್ಯದ ಯೋಜನೆಯ ಗಾತ್ರ

385 (2042): ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ):-

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1992-93ನೇ ಸಾಲಿನಲ್ಲಿ ರಾಜ್ಯ ಯೋಜನೆಯ ಒಟ್ಟು ಗಾತ್ರವೆಷ್ಟು;

ಆ. ರಾಜ್ಯ ವಲಯಕ್ಕೆ ನಿಗದಿಪಡಿಸಿರುವ ಹಣವೆಷ್ಟು;

ಇ. ಈವರೆಗೆ ರಾಜ್ಯ ವಲಯದಲ್ಲಿ ತೆಗೆದುಕೊಂಡಿರುವ ಕಾಮಗಾರಿಕೆಗಳಿಗೆ ಬಿಡುಗಡೆ ಮಾಡಿರುವ ಹಣ ಎಷ್ಟು ಹಾಗೂ ಆಷ್ಟು ಹಣವನ್ನು ಖರ್ಚು ಮಾಡಲಾಗಿದೆಯೆ;

ಈ. ಜಿಲ್ಲಾ ವಲಯಗಳಿಗೆ ನಿಗದಿಪಡಿಸಿರುವ ಹಣ ಎಷ್ಟು ? ಈವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ. ಹಾಗೂ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ? (ಪ್ರತಿ ಜಿಲ್ಲೆಯ ವಿವರ ನೀಡುವುದು);

ಉ. ಯೋಜನಾ ಗಾತ್ರಕ್ಕೆ ಅನುಸಾರವಾಗಿ ಹಣ ಬಿಡುಗಡೆ ಮಾಡದಿದ್ದಲ್ಲಿ ಅದಕ್ಕೆ ಕಾರಣಗಳೇನು;

ಊ. ಯೋಜನಾ ಗಾತ್ರದಂತೆ ಪೂರ್ಣ ಪ್ರಮಾಣದಲ್ಲಿ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):-

ಅ. ಯೋಜನಾ ಆಯೋಗವು ಅನುಮೋದಿಸಿರುವಂತೆ 1992-93ನೇ ಸಾಲಿನ ರಾಜ್ಯ ಯೋಜನೆಯ ಗಾತ್ರ ರೂಪಾಯಿ 1915 ಕೋಟಿ. ಆದರೆ ಆಯವ್ಯಯ ಅಂದಾಜು 1992-93ನ್ನು ಮಂಡಿಸುವ ಸಮಯದಲ್ಲಿ ಈ ಮೊತ್ತವನ್ನು 2158.84 ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಯಿತು.

ಆ. ರಾಜ್ಯ ವಲಯಕ್ಕೆ ನಿಗದಿಪಡಿಸಿರುವ ಹಣ 1784.52 ಕೋಟಿ ರೂಪಾಯಿಗಳು.

ಇ. ಮುಂದುವರೆಯುವ ರಾಜ್ಯ ಯೋಜನಾ ಕಾಮಗಾರಿಗಳನ್ನು ಹಣಕಾಸು ವರ್ಷದ ಪ್ರಾರಂಭದಲ್ಲಿ ಮಂಜೂರಾಗಿ ತದನಂತರ ಇಲಾಖಾ ಮುಖ್ಯಸ್ಥರು ಕಾಮಗಾರಿಗಳ ಪ್ರಗತಿ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಹಣವನ್ನು ತೆಗೆಯುವರು. ಅದೇ ರೀತಿ, ಹೊಸ ಯೋಜನಾ ಕಾಮಗಾರಿಗಳಿಗೆ ಸರ್ಕಾರದಿಂದ ಒಂದು ಬಾರಿ ಒಪ್ಪಿಗೆ ದೊರೆತು ತದನಂತರ ಸಂಬಂಧಪಟ್ಟ ಪ್ರತಿಯೊಂದು ಇಲಾಖಾ ಮುಖ್ಯಸ್ಥರಿಂದ ಹಣ ತೆಗೆಯಲ್ಪಡುತ್ತದೆ. ಆದುದರಿಂದ ರಾಜ್ಯ ವಲಯದ ಯೋಜನಾ ಕಾಮಗಾರಿಗಳಿಗೆಂದು ವಿವಿಧ ಇಲಾಖೆಗಳಿಂದ ಬಿಡುಗಡೆಯಾದ ಒಟ್ಟು ಹಣವನ್ನು ತಕ್ಷಣ ಕ್ರೋಢೀಕರಿಸಲು ಸಾಧ್ಯವಾಗುವುದಿಲ್ಲ. ವೆಚ್ಚ ಮಾಡಿರುವ ಅಂಕಿಗಳ ವಿಚಾರದಲ್ಲಿ ಜನವರಿ ಅಂತ್ಯದವರೆಗಿನ ವಾಸ್ತವಿಕ ವೆಚ್ಚಗಳು ಲಭ್ಯವಿದ್ದು ಅದರಂತೆ ಆದ ವೆಚ್ಚವು ರೂಪಾಯಿ 989.22 ಕೋಟಿಗಳು ಹಾಗೂ 31ನೇ ಮಾರ್ಚಿ 1993ರ ನಾಲ್ಕನೇ ತ್ರೈಮಾಸಿಕದಲ್ಲಿ ಕೊನೆಗೊಳ್ಳುವಂತೆ ಉಳಿಕೆ ವೆಚ್ಚವನ್ನು ನಿಗದಿಪಡಿಸಲಾಗುವುದೆಂದು ನಿರೀಕ್ಷಿಸಲಾಗಿದೆ.

ಈ. ಜಿಲ್ಲಾ ಪರಿಷತ್ ವಲಯಕ್ಕೆ ನಿಗದಿಪಡಿಸಿರುವ ಹಣ 374.32 ಕೋಟಿ ರೂಪಾಯಿಗಳು. ಇದರಲ್ಲಿ ಹಣಕಾಸು ಇಲಾಖೆಯಿಂದ ಬಿಡುಗಡೆ ಮಾಡಬೇಕಾಗಿರುವ ಹಣ 272.87 ಕೋಟಿ ರೂಪಾಯಿಗಳು. ರಾಜ್ಯ ಯೋಜನಾ ವಲಯಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಬಿಡುಗಡೆ ಮಾಡಬೇಕಾಗಿರುವ ಹಣ 42.62 ಕೋಟಿ ರೂಪಾಯಿಗಳು ಹಾಗೂ

ಕೇಂದ್ರ ಪುರಸ್ಕೃತ ಹಾಗೂ ಕೇಂದ್ರ ವಲಯಗಳ ಯೋಜನೆಗಳಿಗೆ ರಾಜ್ಯದ ಪಾಲೆಂದು ಇತರ ಇಲಾಖೆಗಳಿಂದ ಬಿಡುಗಡೆ ಮಾಡಬೇಕಾಗಿರುವುದು ಉಳಿಕೆ ಹಣವಾಗಿರುತ್ತದೆ. ಒಟ್ಟು 272.87 ಕೋಟಿ ರೂಪಾಯಿಗಳಲ್ಲಿ ವಿವಿಧ ಜಿಲ್ಲಾ ಪರಿಷತ್ತುಗಳಿಗೆಂದು ಬಿಡುಗಡೆ ಮಾಡಿರುವ ಒಟ್ಟು ಹಣ 229.25 ಕೋಟಿ ರೂಪಾಯಿಗಳು. ಜನವರಿಯ ಅಂತ್ಯದವರೆಗೆ ಜಿಲ್ಲಾವಾರು ವೆಚ್ಚದ ವಿವರಗಳ ಪಟ್ಟಿಯನ್ನು ಲಗತ್ತಿಸಲಾಗಿದೆ. ಆಯವ್ಯಯವಾಗಿರುವ 42.62 ಕೋಟಿ ರೂಪಾಯಿಗಳಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು 31.75 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಆದರೆ ಪ್ರತಿಯೊಂದು ಇಲಾಖೆಯು ಕೇಂದ್ರ ಪುರಸ್ಕೃತ ಹಾಗೂ ಕೇಂದ್ರ ವಲಯದ ಯೋಜನೆಗಳಿಗೆ ರಾಜ್ಯದ ಪಾಲೆಂದು ಬಿಡುಗಡೆ ಮಾಡಿರುವ ಹಣದ ವಿವರಗಳು ತಕ್ಷಣ ಲಭ್ಯವಿರುವುದಿಲ್ಲ.

ಊ. ಯೋಜನಾ ಗಾತ್ರದ ಹಣ ಬಿಡುಗಡೆ ಮಾಡುವ ಪ್ರಮಾಣವು ಹೆಚ್ಚಿನ ಪಾಲು ಸರಿಸಮವಾಗಿರುತ್ತದೆ.

ಋ. ಅನುಮೋದಿತವಾದ ಯೋಜನೆಯ ನಿಗದಿಯನ್ನು ಸಾಧಿಸುವ ಸಲುವಾಗಿ 31ನೇ ಮಾರ್ಚ್ 1993ರ ಒಳಗಾಗಿ ಉಳಿದ ಹಣವನ್ನು ಬಿಡುಗಡೆ ಮಾಡುವಂತೆ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ.

1993ರ ಜನವರಿ ಅಂತ್ಯದವರೆಗಿನ ಜಿಲ್ಲಾವಾರು ವೆಚ್ಚಗಳ ಅಂಕಿಗಳು

ಜಿಲ್ಲಾ ಪರಿಷತ್ತಿನ ಹೆಸರು	1993ರ ವೆಚ್ಚ (ಜನವರಿವರೆಗೆ)	
1. ಚಿಂಗಳೂರು (ಗ್ರಾಮಾಂತರ)	723.28	
2. ಚಿತ್ರದುರ್ಗ	978.72	
3. ಕೋಲಾರ	898.52	
4. ಶಿವಮೊಗ್ಗ	717.55	
5. ತುಮಕೂರು	962.45	
6. ಮೈಸೂರು	924.88	
7. ಚಿಕ್ಕಮಗಳೂರು	750.23	
8. ದಕ್ಷಿಣ ಕನ್ನಡ	896.14	
9. ಹಾಸನ	1037.42	
10. ಕೊಡಗು	316.86	
11. ಮಂಡ್ಯ	740.46	
12. ಬೆಳಗಾಂ	–	
13. ಚಿಕ್ಕಬಳ್ಳಾಪುರ	1256.68	
14. ಧಾರವಾಡ	1026.61	
15. ಉತ್ತರ ಕನ್ನಡ	527.27	
16. ಗುಲ್ಬರ್ಗ	1186.11	ಬೆಳಗಾಂ ಮತ್ತು
17. ಬಳ್ಳಾರಿ	872.95	ಬೀದರ್‌ನ
18. ಬೀದರ್	–	ವೆಚ್ಚವು
19. ರಾಯಚೂರು	714.68	ದೊರೆಯುವುದಿಲ್ಲ.
	14318.44	

ಶ್ರೀ ಬಸವರಾಜ ರಾಯರೆಡ್ಡಿ:– ಮಾನ್ಯ ಅಧ್ಯಕ್ಷರೇ, ಇದು ಬಹಳ ಮಹತ್ವಪೂರ್ಣ ಹಾಗೂ ಅತ್ಯಂತ ಪ್ರಾಮುಖ್ಯವಾದ ಪ್ರಶ್ನೆ. ಇದು ರಾಜ್ಯದ ಹಣಕಾಸು ಮತ್ತು ಯೋಜನೆಗಳಿಗೆ ಸಂಬಂಧಪಟ್ಟಿದ್ದುದು. ಆದರೆ ಮಾನ್ಯ ಮುಖ್ಯಮಂತ್ರಿಗಳು ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಕೊಟ್ಟಿಲ್ಲ. ಜಿಲ್ಲಾವಾರು ಮಾಹಿತಿಯನ್ನು ನಾನು ಕೇಳಿದ್ದೇನೆ. ದಯಮಾಡಿ ಅದನ್ನು ಸಂಪೂರ್ಣವಾಗಿ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ ಮತ್ತು ಈ ರೀತಿ ಉತ್ತರವನ್ನು ಅವರು ಕೊಟ್ಟಿದ್ದಾರೆ. ಅಧ್ಯಕ್ಷರೇ, ಈ ವರ್ಷದ ನಮ್ಮ ಯೋಜನೆಯ ವೆಚ್ಚ 2158.84 ಕೋಟಿ ರೂಪಾಯಿಗಳು ಎಂದು ನಿಗದಿ ಮಾಡಿದ್ದಾರೆ. ಇದರಲ್ಲಿ ರಾಜ್ಯವಲಯಕ್ಕೆ 1784.52 ಕೋಟಿ ರೂಪಾಯಿಗಳು ಮತ್ತು ಜಿಲ್ಲಾ ವಲಯಕ್ಕೆ 374.32 ಕೋಟಿ ರೂಪಾಯಿ ನಿಗದಿಪಡಿಸಿದ್ದಾರೆ. ನನ್ನ ಪ್ರಶ್ನೆ ಜಿಲ್ಲಾವಾರು ಎಷ್ಟು ಬಿಡುಗಡೆ ಮಾಡಿದ್ದೀರಿ, ಎಷ್ಟು ಹಣ ಖರ್ಚು ಆಗಿದೆ ಎಂದು, ರಾಜ್ಯವಲಯದಲ್ಲಿ ಎಷ್ಟು ಖರ್ಚು ಆಗಿದೆ ಎನ್ನುವುದಕ್ಕೆ ಸರಿಯಾದ ಉತ್ತರ ಬಂದಿಲ್ಲ. ಆದರೂ ಕೂಡ ಅಧ್ಯಕ್ಷರೇ, ಯೋಜನೆಗೆ ಅನುಸಾರವಾಗಿ ಏನು ಹಣ ಕ್ರೋಢೀಕರಣ ಮಾಡಿಕೊಂಡು ಕೆಲಸ ಮಾಡಬೇಕೋ, ಅದನ್ನು ರಾಜ್ಯ ಸರ್ಕಾರ ಯೋಜನಾ ಹಣದಲ್ಲಿ ಕ್ರೋಢೀಕರಣ ಮಾಡುವುದಕ್ಕೆ ಆಗಲ್ಲ. ಏಕೆಂದರೆ, ನನಗೆ ಕೊಟ್ಟ ಉತ್ತರದಲ್ಲಿ ರಾಜ್ಯ ವಲಯಕ್ಕೆ 1784 ಕೋಟಿ ರೂ.ಗಳನ್ನು ನಿಗದಿ ಮಾಡಿದ್ದಾರೆ. ಆದರೆ ಇದುವರೆಗೆ ಬಿಡುಗಡೆ ಮಾಡಿದ್ದುದು 989 ಕೋಟಿ ರೂಪಾಯಿಗಳು ಮಾತ್ರ. ಆದರೆ ಖರ್ಚು ಎಷ್ಟು ಎಂದರೆ ಏನನ್ನೂ ಹೇಳಿಲ್ಲ. ಆದರೂ ಕೂಡ ರಾಜ್ಯ ವಲಯದಲ್ಲಿ 795 ಕೋಟಿ ಬಿಡುಗಡೆ ಮಾಡಬೇಕು. ಜಿಲ್ಲಾ ವಲಯದಲ್ಲಿ 374.32 ಕೋಟಿ ನಿಗದಿ ಮಾಡಿದ್ದಾರೆ. ಇಲ್ಲಿಯವರೆಗೆ ರಿಲೀಸ್ ಮಾಡಿದ್ದುದು 143 ಕೋಟಿಯಾದರೆ ಇನ್ನೂ ಕೂಡ 231 ಕೋಟಿಯನ್ನು ಜಿಲ್ಲಾ ವಲಯದಲ್ಲಿ ಬಿಡುಗಡೆ ಮಾಡಬೇಕು. ಒಟ್ಟಾರೆ 2158 ಕೋಟಿ ರೂಪಾಯಿಗೆ ಈವರೆಗೆ 1132 ಕೋಟಿ ರೂಪಾಯಿ ರಿಲೀಸ್ ಆಗಿದೆ. ಇನ್ನೂ 1026 ಕೋಟಿ ರೂಪಾಯಿಗಳನ್ನು ರಾಜ್ಯ ಮತ್ತು ಜಿಲ್ಲಾ ವಲಯದಲ್ಲಿ ಯಾವಾಗ ಬಿಡುಗಡೆ ಮಾಡುತ್ತಾರೆ ? ಈಗಾಗಲೇ 16ನೇ ತಾರೀಖು. ಇನ್ನು 14 ದಿವಸಗಳಲ್ಲಿ ಇವರು ಹೇಗೆ ಬಿಡುಗಡೆ ಮಾಡುತ್ತಾರೆ ? ಯಾವಾಗ ಇವರು ಹಣವನ್ನು ಬಿಡುಗಡೆ ಮಾಡುತ್ತಾರೆ ? ಮತ್ತೆ ಏನು ಪ್ರಶ್ನೆ ಕೇಳಿದ್ದೇನೆ ಅದರಲ್ಲಿ ಜಿಲ್ಲಾವಾರು ಮಾಹಿತಿಯನ್ನು ಆಮೇಲೆ ಕೊಡುತ್ತೇನೆಂದು ಹೇಳಿದ್ದಾರೆ. ಆ ವಿವರ ನಿಮ್ಮ ಹತ್ತಿರ ಇಲ್ಲವೇ ? ಇವತ್ತು ಏನು 50 ಪರ್ಸೆಂಟ್‌ಗಿಂತ ಕಡಿಮೆ ಹಣವನ್ನು ಬಿಡುಗಡೆ ಮಾಡಿದ್ದೀರಿ ಅದನ್ನು ನೋಡಿದರೆ ನಿಮ್ಮಲ್ಲಿ ಹಣ ಕ್ರೋಢೀಕರಣ ಮಾಡುವುದಕ್ಕೆ ಸಾಧ್ಯವಾಗಿಲ್ಲವೇ ? ಸರ್ಕಾರದಲ್ಲಿ ಹಣವೇ ಇಲ್ಲವೇ ಹೇಗೆ ? ಇದನ್ನೆಲ್ಲಾ ತಾವು ಸವಿಸ್ತಾರವಾಗಿ ತಿಳಿಸಬೇಕು. ಇಲ್ಲದಿದ್ದರೆ ಬಹುಶಃ ಇದು ನಮ್ಮ ರಾಜ್ಯಕ್ಕೆ ದೊಡ್ಡ ಮೋಸ ಆಗುತ್ತದೆಂದು ನಾನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಯೋಜನೆಗಳನ್ನು ಚೆನ್ನಾಗಿ ಮಾಡುತ್ತಾರೆಂದು ನಾನು ತಿಳಿದಿದ್ದೇನೆ. ಆದ್ದರಿಂದ ಪ್ರಮಾಣಿಕವಾದ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಸಂಶೆ ಬಗ್ಗೆ ಬಹಳ ಕೃತಜ್ಞತೆಗಳು. ಈ ವಿಚಾರದಲ್ಲಿ ಯಾವುದೇ ಆತಂಕಕ್ಕೆ ಅವಕಾಶ ಇಲ್ಲ. ಖರ್ಚು ಆಗುವುದಿಲ್ಲ ಎನ್ನುವುದಕ್ಕೆ ಅವಕಾಶ ಇಲ್ಲ. ನಾವು ಇಲ್ಲಿ ಏನು ಒಂದು ಅಂಕಿಸಂಖ್ಯೆ ಕೊಟ್ಟಿದ್ದೇವೆ ಅದು ಜನವರಿ ಅಂತ್ಯಕ್ಕೆ ಸಂಬಂಧಪಟ್ಟಿದ್ದುದು ಆಗಿದೆ. ಜನವರಿಯ ಅನಂತರ ಫೆಬ್ರವರಿಯವರೆಗಿನ ಅಂಕಿಸಂಖ್ಯೆಗಳನ್ನು ಮೊನ್ನೆ ಆಯವ್ಯಯದಲ್ಲಿ ಉತ್ತರ ಕೊಡುವಾಗ ಹೇಳಿದ್ದೇನೆ. ಆದರ ಅಂಕಿಸಂಖ್ಯೆಯನ್ನು ಒದಗಿಸಿದ್ದೇನೆ. ಆ ಅಂಕಿಸಂಖ್ಯೆಗಳನ್ನು ತಮಗೆ ತಲುಪಿಸುತ್ತೇನೆ. ಸ್ಪಷ್ಟವಾದ ಚಿತ್ರವನ್ನು ತಮಗೆ ಕೊಟ್ಟಿದ್ದೇನೆ. ಜನವರಿವರೆಗೆ ಯೋಜನೆಯಲ್ಲಿ 989.22 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಮತ್ತು ಜಿಲ್ಲಾಪರಿಷತ್ತುಗಳಿಗೆ ನಿಗದಿ ಮಾಡಿದ್ದ 374.32 ಕೋಟಿ ರೂಪಾಯಿಯಲ್ಲಿ 272.37 ಕೋಟಿ ಮಾತ್ರ ಬಿಡುಗಡೆ ಮಾಡಿದ್ದು ಉಳಿದ ಹಣವನ್ನು ರಾಜ್ಯವಲಯದಲ್ಲಿ ನೀಡತಕ್ಕ ಇತರ ಇಲಾಖೆಯಿಂದ

ಬಿಡುಗಡೆ ಮಾಡುತ್ತೇವೆ. ಒಟ್ಟು 272 ಕೋಟಿ ರೂಪಾಯಿಗಳಲ್ಲಿ ವಿವಿಧ ಜಿಲ್ಲಾ ಪರಿಷತ್ತುಗಳಿಗೆಂದು ಬಿಡುಗಡೆ ಮಾಡಿರುವ ಒಟ್ಟು ಹಣ 229ಕೋಟಿ ರೂಪಾಯಿ ಆಗುತ್ತದೆ. ಉಳಿದ ಹಣವನ್ನು ಮಾರ್ಚ್ ಒಳಗೆ ಖಂಡಿತವಾಗಿ ಬಿಡುಗಡೆ ಮಾಡುತ್ತೇವೆ. ಇದನ್ನು ಲ್ಯಾಪ್ಸ್ ಮಾಡುವ ಪ್ರಶ್ನೆಯೇ ಇಲ್ಲ. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಅಡಿಯಲ್ಲಿ 42.62 ಕೋಟಿ ಬಿಡುಗಡೆ ಮಾಡಬೇಕಾಗಿದ್ದು ಅಲ್ಲಿ 31.75 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಅಂದರೆ ಇನ್ನು 5 ಕೋಟಿ ಮಾತ್ರ ಉಳಿಯತಕ್ಕದ್ದು. ನಾವು ಲೆಕ್ಕವನ್ನು ಜನವರಿ ಅಂತ್ಯದವರೆಗೆ ಕೊಟ್ಟಿದ್ದು ಇದೆ. ಆದ್ದರಿಂದ ಮಾನ್ಯ ಸದಸ್ಯರು ಅಂತಹ ಸಂಶಯಪಡಬೇಕಾಗಿಲ್ಲ. ಏನು ಯೋಜನಾ ಅಯೋಗದವರು ನಿಗದಿ ಮಾಡಿದ್ದಾರೆ ಅದರ ಪ್ರಕಾರವಾಗಿ ಬಿಡುಗಡೆ ಮಾಡುವುದಕ್ಕೆ ನಾವು ಹಣವನ್ನು ಜೋಡಿಸಿದ್ದೇವೆ. ಅದರ ಪ್ರಕಾರ ನಾವು ಬಿಡುಗಡೆ ಮಾಡುತ್ತೇವೆ. ಮಾರ್ಚ್ ಒಳಗಡೆ ಅದನ್ನು ಮಾಡುತ್ತೇವೆ.

ಶ್ರೀ ಬಸವರಾಜ ರಾಯರೆಡ್ಡಿ:– ಅಧ್ಯಕ್ಷರೇ, ದಯವಿಟ್ಟು....

ಅಧ್ಯಕ್ಷರು:– ನಿಮಗೆ ಆರು ನಿಮಿಷ ಕೊಟ್ಟಿದ್ದೇನೆ. ನೀವು ಪ್ರಶ್ನೆ ಕೇಳುವ ಬದಲು ಓದಿಕೊಂಡು ಹೋದರೆ ಏನು ಮಾಡುವುದು ? ಸಪ್ಲಿಮೆಂಟರಿಯನ್ನು ನೀವು ಕೇಳಬೇಕು.

ಶ್ರೀ ಬಸವರಾಜ ರಾಯರೆಡ್ಡಿ:– ಇದು ಬಹಳ ಪ್ರಮುಖವಾದ ಪ್ರಶ್ನೆ. ತಾವು ಅರ್ಧಗಂಟೆ ಚರ್ಚೆಗಾದರೂ ಕೊಡಿ.

ಅಧ್ಯಕ್ಷರು:– ನೀವು ಬರೆದು ಕಳುಹಿಸಿ.

ಕೊಟ್ಟೂರಿನಲ್ಲಿ ಅಗ್ನಿಶಾಮಕ ಠಾಣೆ

386 (129): ಶ್ರೀ ಕೆ.ವಿ. ರವೀಂದ್ರನಾಥ್ ಬಾಬು (ಕೊಟ್ಟೂರು):–

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬಹಳ ಕಾಲದಿಂದಲೂ ಕೊಟ್ಟೂರಿನಲ್ಲಿ ಒಂದು ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸುವ ಪ್ರಸ್ತಾವನೆಯು ತಡವಾಗಿರುವುದಕ್ಕೆ ಕಾರಣಗಳು;

ಆ. ಸರ್ಕಾರಕ್ಕೆ ಸಲ್ಲಿಸಲಾಗಿರುವ ಸರ್ವೆ ವರದಿಯ ಮೇಲೆ ತೆಗೆದುಕೊಳ್ಳಲಾದ ಕ್ರಮಗಳು;

ಇ. ಈ ಕಾರ್ಯವನ್ನು ಯಾವಾಗ ತೆಗೆದುಕೊಳ್ಳಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ. ಈ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆಯು ಬಾಕಿ ಇರುವುದಿಲ್ಲ.

ಆ. ಯಾವುದೇ ಸರ್ವೆ ವರದಿಯು ಸರ್ಕಾರದ ಮುಂದಿರುವುದಿಲ್ಲ.

ಇ. ಮೇಲೆ (ಅ) ಗೆ ಉತ್ತರಿಸುವ ಮೇರೆಗೆ ಉದ್ಭವಿಸುವುದಿಲ್ಲ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು:– ಮಾನ್ಯ ಅಧ್ಯಕ್ಷರೇ, ಕೊಟ್ಟೂರಿನಲ್ಲಿ ಅಗ್ನಿಶಾಮಕದಳಕ್ಕೆ ನಾವು ಪ್ರಪೋಸಲ್ ಕೊಟ್ಟಿದ್ದು 'ಇಲ್ಲ'ವೆಂದು ಹೇಳಿದ್ದಾರೆ. ಮತ್ತು ಅದನ್ನು ಸರ್ವೆ ಮಾಡಿರುವುದು ಯಾವುದೇ ರಿಪೋರ್ಟ್ ಇಲ್ಲವೆಂದು ಹೇಳುತ್ತಿದ್ದಾರೆ. ಕೊಟ್ಟೂರು ಮುಖ್ಯವಾಗಿ ಕಾಟನ್ ಗ್ರೋಯಿಂಗ್ ಏರಿಯಾ ಮತ್ತು ಮಾರ್ಕೆಟ್ ಇರತಕ್ಕಂಥ ಸ್ಥಳವಾಗಿದೆ. ಅಲ್ಲಿ ಅಗ್ನಿಶಾಮಕದಳ ಮುಖ್ಯವಾಗಿ ಬೇಕು ಎಂದು ನಾನು ಕೇಳಿದ್ದೆ. ಹಿಂದೆ ಶ್ರೀ ಧರ್ಮಸಿಂಗ್ ಅವರು ಹೋಮ್ ಮಿನಿಸ್ಟರ್